12. (1) ಪ್ರಕಟಣೆ :

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2011ನೇ ಸಾಲಿನ ಕರ್ನಾಟಕ ಜಲಸಾರಿಗೆ ಮಂಡಳಿ ವಿಧೇಯಕವನ್ನು ದಿನಾಂಕ: 16–12–2011 ರಂದು ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಈಗ ನಿಯಮ 69 ರ ಮೇಲೆ ಚರ್ಚೆ. ಮಾನ್ಯ ಶ್ರೀನಿವಾಸ ಪ್ರಸಾದ್, ಜಯಚಂದ್ರರವರು ಹಾಗೂ ಇತರರು ಸಲ್ಲಿಸಿರುವ ಬಗ್ಗೆ.

ಡಾ: ಹೆಚ್.ಸಿ. ಮಹಾದೇವಪ್ಪ : ಮಡೆ ಸ್ನಾನದ ಬಗ್ಗೆ.

ಶ್ರೀ ಸಿದ್ದರಾಮಯ್ಯ : ಮಡೆ ಸ್ನಾನ ಅಲ್ಲ, ಎಂಜಲು ಸ್ನಾನ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಮುಜರಾಯಿ ಸಚಿವರು ಎಲ್ಲಿ? ಅವರು ಮುಖ್ಯವಾಗಿ ಇರಬೇಕಾಗುತ್ತದೆ.

ಅಧ್ಯಕ್ಷರು : ಇನ್ನೊಂದು ಸಣ್ಣ ಪ್ರಕಟಣೆ ಇದೆ.

(2) ಪ್ರಕಟಣೆ :

ವಿಧಾನ ಸಭಾ ಸದಸ್ಯರಾದ ಶ್ರೀ ಈಶಣ್ಣ ಗುಳಗಣ್ಣನವರು ಅನಾರೋಗ್ಯದಿಂದ ಬಳಲುತ್ತಿದ್ದು ಹೆಚ್ಚಿನ ಚಿಕಿತ್ಸೆಯನ್ನು ಆಸ್ಪತ್ರೆಯಲ್ಲಿ ಪಡೆಯುತ್ತಿರುವ ಪ್ರಯುಕ್ತ ದಿನಾಂಕ: 05–12–2011 ರಿಂದ ನಡೆಯಲಿರುವ ಅಧಿವೇಶನಕ್ಕೆ ಗೈರು ಹಾಜರಿಯಾಗಲು ಅನುಮತಿ ಕೋರಿ ಪತ್ರ ನೀಡಿರುತ್ತಾರೆ. ಮಾನ್ಯ ಸದಸ್ಯರು ಸದನಕ್ಕೆ ಪ್ರಸ್ತಾಪಿತ ಅವಧಿಯಲ್ಲಿ ಗೈರು ಹಾಜರಿಯಾಗಲು ಸದನದ ಸಹಮತ ಇದೆಯೆಂದು ಭಾವಿಸಲಾಗಿದೆ. ಶ್ರೀ ಈಶಣ್ಣ ಗುಳಗಣ್ಣನವರು ದಿನಾಂಕ: 05–12–2011 ರಿಂದ ನಡೆಯಲಿರುವ ಅಧಿವೇಶನದ ಸಂದರ್ಭದಲ್ಲಿ ಸದನಕ್ಕೆ ಗೈರು ಹಾಜರಿಯಾಗಲು ಅನುಮತಿ ನೀಡಲಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ : ಗಮನ ಸೆಳೆಯುವ ಸೂಚನೆ ಮತ್ತು 69 ನಲ್ಲಿ ಲೋಕಾಯುಕ್ತರ ನೇಮಕಾತಿ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ : ಈಗ 69ರ ಅಡಿಯಲ್ಲಿ ಕೊಟ್ಟಿರುವುದನ್ನು ಮೊದಲು ಮುಗಿಸಿ ನಂತರ Calling Attention ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ : Calling Attention ತೆಗೆದುಕೊಳ್ಳಿ ಸರ್.

ಶ್ರೀ ಸಿದ್ದರಾಮಯ್ಯ : Calling Attention ಬಹಳ ಇವೆ. ಅವು ಆಗಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಯಾರೂ ಮೆಂಬರ್ಸ್ ಇಲ್ಲ. 5–6 ಜನ ಜನರದ್ದು ಇದೆ ಸರ್ ಅಷ್ಟೆ. ಇಲ್ಲಿ 5–6 ಜನ ಮೆಂಬರ್ಸ್ Calling Attention ಇದೆ. ಮೆಂಬರ್ಸ್ ಯಾರೂ ಇಲ್ಲ. ದಯಮಾಡಿ ನಾವು 5–6 ದಿನಗಳಿಂದ ಕಾಯುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ನೀವು ಹೇಳಿದ್ದಕ್ಕೆಲ್ಲಾ co-operate ಮಾಡಿದ್ದೇವೆ. ದಯಮಾಡಿ ಮೊದಲು Calling Attention ತೆಗೆದುಕೊಳ್ಳಿ. ಇಲ್ಲವೆಂದರೆ ನಾವು ಬಂದು ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ದಯಮಾಡಿ ಮೊದಲು Calling Attention ತೆಗೆದುಕೊಳ್ಳಲಿಕ್ಕೆ ಹೇಳಿ. ಮಡೆ ಸ್ನಾನ ಬೇಕಾದರೆ ರಾತ್ರಿ 10 ಗಂಟೆಯಾಗಲಿ ಕುಳಿತುಕೊಂಡು ಚರ್ಚೆ ಮಾಡೋಣ. ಇದರ ಬಗ್ಗೆ ನಮ್ಮದೇನೂ ವಿರೋಧವಿಲ್ಲ. ದಯಮಾಡಿ ನಮಗೆ ಸಹಕಾರ ಮಾಡಿ. ನಾವು ನೀವು ಹೇಳಿದ್ದು ಮಾಡಿದ್ದೇವೆ. ಸಿದ್ದರಾಮಣ್ಣ ನವರು ಹೇಳಿದ್ದು ಮಾಡಿದ್ದೇವೆ, ಆದ್ದರಿಂದ ಈಗ ದಯಮಾಡಿ ಗಮನ ಸೆಳೆಯುವ ಸೂಚನೆ 4–5 ಇವೆ. ಮೊದಲು ಅದನ್ನು ತೆಗೆದುಕೊಳ್ಳಿ. ಒಂದೇ ಒಂದು ತುಂಬಾ ಮುಖ್ಯವಾದ ಗಮನ ಸೆಳೆಯುವ ಸೂಚನೆಯಲ್ಲಿದೆ, ಅರಕಲಗೂಡಿಗೆ ಸಂಬಂಧಪಟ್ಟಿದ್ದು ಇದೆ.

(ಗೊಂದಲ)

ಅಧ್ಯಕ್ಷರು : ಇಲ್ಲಿ ಯಾರೂ ಉತ್ತರ ಕೊಡುವುದಕ್ಕೆ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಯಾರಾದರೂ ಉತ್ತರ ಕೊಡಲಿ. ನೀವು ತೆಗೆದುಕೊಳ್ಳಿ. ನಾನು ಸಭೆಯ ಗಮನಕ್ಕೆ ತರುತ್ತೇನೆ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಇಲ್ಲಿ ಯಾರು ಇದ್ದಾರೆ? ಸದನ ನಡೆಸುವವರು ನೀವು ಯಾರು ಇದ್ದಾರೆ? ನಾವು ಏನು ಮಾತನಾಡುವುದು? ಯಾರು ನೋಟ್ ಮಾಡಿಕೊಳ್ಳುತ್ತಾರೆ? ಉತ್ತರ ಕೊಡುವವರು ಯಾರು?

(ಗೊಂದಲ)

ಶ್ರೀ ಸಿದ್ದರಾಮಯ್ಯ : Irresponsible Government.

(ಗೊಂದಲ)

ಅಧ್ಯಕ್ಷರು : ಮಂತ್ರಿಗಳನ್ನು ಕರೆಯಿರಿ.

ಶ್ರೀ ಡಿ.ಕೆ. ಶಿವಕುಮಾರ್ : ಒಂದು ಬಿಲ್ ಬಿದ್ದು ಹೋದ ಮೇಲೂ ಕೂಡ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲವೆಂದರೆ, ಈ ಸರ್ಕಾರಕ್ಕೆ ಕಣ್ಣು ಇಲ್ಲ, ಕಿವಿನೂ ಇಲ್ಲ. ಎರಡೂ ಇಲ್ಲ ಸ್ವಾಮಿ.

ಶ್ರೀ ಎ.ಮಂಜು : ಅದಕ್ಕೆ ರಾಮಚಂದ್ರಗೌಡರಿಗೆ ಕಿವಿ instrument ಕೊಡಿಸಿರುವುದು.

ಅಧ್ಯಕ್ಷರು : ನಿಮಗೊಂದು ಕೊಡಿಸೋಣ.

ಶ್ರೀ ಎ.ಮಂಜು : ನೀವು ಕೊಡಿಸಿದರೆ ನಾವು ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು : ಏಕೆ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಮಾನ್ಯ ಮುಜರಾಯಿ ಸಚಿವರು ಏಕೆ ಪಲಾಯನ ಮಾಡಿದ್ದಾರೆ?ನಾನು ನಿಯಮ 69ರಡಿಯಲ್ಲಿ ನಿನ್ನೆ ಸ್ಪೀಕರ್ ರವರಿಗೆ ಇದು ಬಹಳ ಮುಖ್ಯವಾದ ವಿಷಯವೆಂದು ಶೂನ್ಯವೇಳೆಯಲ್ಲಿ ಸಬ್ಮಿಷನ್ ಮಾಡಲು ಕೋರಿದ್ದು, ...

ಶ್ರೀ ಹೆಚ್.ಡಿ. ರೇವಣ್ಣ : ಲೋಕಾಯುಕ್ತರ ನೇಮಕಾತಿ ಬಗ್ಗೆಯೂ ನಾನು ಒಂದು ವಾರದ ಹಿಂದೆಯೇ ಕೇಳಿದ್ದೇನೆ. ನಾನು ಕೊಟ್ಟಿರುವುದು ನಿಯಮ 69ರಲ್ಲಿ ಇಲ್ಲ. ಬೇಕೆಂದೇ ತೆಗೆದಿಟ್ಟಿದ್ದಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಅವರನ್ನು ಅಲೋ ಮಾಡುತ್ತೀರೋ, ನನ್ನನ್ನು ಅಲೋ ಮಾಡುತ್ತೀರೋ?

ಅಧ್ಯಕ್ಷರು : ರೇವಣ್ಣನವರೇ, ಶ್ರೀನಿವಾಸ್ ಪ್ರಸಾದ್‌ರವರದ್ದು ಮುಗಿಸಿಬಿಡಲಿ. ತಾವು ಮಾತನಾಡಿ ಪ್ರಸಾದ್‌ರವರೇ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಒಂದು ವಾರದಿಂದಲೂ ನಾವು ಕೇಳುತ್ತಿದ್ದೇವೆ.

(ಗೊಂದಲ)

ಡಾ: ಹೆಚ್.ಸಿ ಮಹದೇವಪ್ಪ : ಹೌಸ್ ಪ್ರಾರಂಭವಾದಾಗಿನಿಂದ ನಾವು Calling Attention Notice ಹಾಕಿದೆವು, ಶೂನ್ಯವೇಳೆಯಲ್ಲಿ ಸಬ್ಮಿಷನ್ ಮಾಡಿದಾಗ ರೂಲ್-69ಕ್ಕೆ ಕನ್ವರ್ಟ್ ಮಾಡಿದಿರಿ. ಇದು ಸಾಮಾಜಿಕವಾಗಿ ಅತ್ಯಂತ ಪ್ರಮುಖವಾದಂಥ ವಿಷಯ.

(ಗೊಂದಲ)

ಅಧ್ಯಕ್ಷರು : ರೇವಣ್ಣನವರೇ, ಸಹಕಾರ ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಅದನ್ನು ಮಾತ್ರವಲ್ಲ, ದಯಮಾಡಿ ನೀವು ನಮ್ಮದನ್ನೂ ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ : What is happening is not debated in this House.

(ಗೊಂದಲ)

ಅಧ್ಯಕ್ಷರು : ನಾನು ಈಗ ಶ್ರೀನಿವಾಸ ಪ್ರಸಾದ್‌ರವರನ್ನು ಕರೆದಿದ್ದೇನೆ. ಅವರದ್ದಾದ ಮೇಲೆ ನಾನು ತಮ್ಮದನ್ನು ತೆಗೆದುಕೊಳ್ಳುತ್ತೇನೆ. ಈಗ ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಇದಾದ ತಕ್ಷಣ Calling Attention Notice ತೆಗೆದುಕೊಳ್ಳುತ್ತೇನೆ, ಆಮೇಲೆ ಲೋಕಾಯುಕ್ತರ ನೇಮಕದ ಬಗ್ಗೆ ತೆಗೆದುಕೊಳ್ಳುತ್ತೇನೆ.

13. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ :

ವಿಷಯ : ಶ್ರೀ ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಆಚರಣೆಯಲ್ಲಿರುವ ಮೂಡನಂಬಿಕೆಯ ಮಡೆಸ್ನಾನ ಅನಿಷ್ಟ ಪದ್ಧತಿಯನ್ನು ನಿಷೇಧಿಸುವ ಬಗ್ಗೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) : ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ, ಶ್ರೀ ಕುಕ್ಕೆ ಸುಬ್ರಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಮಡೆ ಮಡೆಸ್ನಾನ ಇನ್ನೂ ಕೂಡ ಆಚರಣೆಯಲ್ಲಿದೆ ಎನ್ನುವ ಹಿನ್ನೆಲೆಯಲ್ಲಿ ಇವತ್ತು ರಾಜ್ಯದ ಎಲ್ಲಾ ಪ್ರಜ್ಞಾವಂತ ನಾಗರಿಕರು ಕೂಡ ಇದೊಂದು ಸಾಮಾಜಿಕ ಅನಿಷ್ಟ ಎಂದು ಹೇಳಿ ಇದನ್ನು ವಿರೋಧಿಸಿದ್ದಾರೆ, ಖಂಡಿಸಿದ್ದಾರೆ. ಬಹಳ ಅಮಾನುಷವಾದಂಥ, ಅಮಾನವೀಯವಾದಂಥ, ಅಸಹ್ಯಕರವಾದಂಥ ಈ ಒಂದು ಪದ್ಧತಿ ಇನ್ನೂ ಜೀವಂತವಾಗಿದೆ, ಆಚರಣೆಯಲ್ಲಿದೆ ಎಂದು ಕಂಡಿಸಿದ್ದಾರೆ. ಇದರ ಬಗ್ಗೆ ಈಗಾಗಲೇ ಸಚಿವರು ದ್ವಂದ್ವವಾದಂಥ ಹೇಳಿಕೆಯನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ, ಇದು ಮುಜರಾಯಿ ಇಲಾಖೆಗೆ ಸೇರಿದಂಥ ದೇವಾಲಯ. ನೇರವಾಗಿ ಸರ್ಕಾರದ ಆಡಳಿತಕ್ಕೆ